
ಕಾನನ
ಡಿಸೆಂಬರ್ 2017
ನಿಸರ್ಗದೆಡೆಗೆ ಪಯಣ
BANNERUGHATTA
WILDLIFE
CONSERVATION
GROUP

# ಕಾನನ

ನಿಸರ್ಗದೆಡೆಗೆ ಪಯಣ

ಮುಖಪುಟ

ನವಿಲು



© ವಿಪಿನ್ ಬಾಳಿಗ

ಡಿಸೆಂಬರ್ 2017

BANNERUGHATTA WILDLIFE CONSERVATION GROUP

* ಗೆರೆ ಅಲೆಮಾರಿ ಚಿಟ್ಟೆಯ ಕೌತುಕದ ಬದುಕು. . .!

* ಹದ್ದು

* ಸರ್ಪ ಮಾರಕ ಶಿಲೀಂಧ್ರ!

* ಎಲ್ಲಿ? (ಕವನ)

* ಪ್ರಕೃತಿ ಬಿಂಬ



ವಿನ್ಯಾಸ

ಅಶ್ವಥ .ಕೆ.ಎನ್

ಮುಖಪುಟ ಛಾಯಾಚಿತ್ರ

ಸೆಪುರಿ ಸಾಯಿ ಅಖಿಲ್ ತೇಜ

ಪರಿಷ್ಕರಣೆ

ಮುರಳಿ .ಎಸ್

ಅನನ್ಯರೂಪ

ಕರಡು ತಿದ್ದುಪಡಿ

ಡಾ.ದೀಪಕ್ ಭದ್ರಶೆಟ್ಟಿ, ಮೈಸೂರು

ಲೇಖಕ ವೃಂದ

ಶಶಿಧರಸ್ವಾಮಿ ಆರ್. ಹಿರೇಮಠ

ಪ್ರೇಮಾ ಶಿವಾನಂದ

ಜೈಕುಮಾರ್ .ಆರ್

ಕೃಷ್ಣನಾಯಕ್

ವಿಪಿನ್ ಬಾಳಿಗ

© ವಿಪಿನ್ ಬಾಳಿಗ



© ಸೆಪುರಿ ಸಾಯಿ ಅಖಿಲ್ ತೇಜ ಹೆಜ್ಜಾರ್ಲೆ

ಹೆಜ್ಜಾರ್ಲೆಗಳನ್ನು ದೊಡ್ಡ ನೀರಿನ ಹಕ್ಕಿಗಳ ಗುಂಪಿಗೆ ಸೇರಿಸಬಹುದು. ಇವು ನಮ್ಮ ಕನ್ನಡ ನಾಡಿನ ಕೊಕ್ಕರೆಬೆಳ್ಳೂರು, ಮೈಸೂರು, ರಂಗನತಿಟ್ಟು ಮುಂತಾದ ಜಾಗಗಳಲ್ಲಿ ಕಂಡುಬರುತ್ತವೆ. ಈ ಹಕ್ಕಿಗಳ ವಿಶೇಷತೆ ಎಂದರೆ ಮೀನನ್ನು ಹಿಡಿಯಲು ತನ್ನ ಜೋಳಿಗೆಯಂತ ಕೊಕ್ಕನ್ನು ಬಲೆಯಂತೆ ಬಳಸುತ್ತವೆ. ನಿಮಗೆ ಗೊತ್ತ ಈ ಹಕ್ಕಿಗಳು ಈಗ ಅಪಾಯದಂಚಿನಲ್ಲಿವೆ. ಆದ್ದರಿಂದ ಇವುಗಳ ಸಂರಕ್ಷಣೆ ಬಹಳ ಮುಖ್ಯ.



# ಗೆರೆ ಅಲೆಮಾರಿ ಚಿಟ್ಟೆಯ ಕೌತುಕದ ಬದುಕು..!

ನನ್ನವ್ವ ಸಂಪತ್ತಮ್ಮನಿಗೆ ಔಷಧಿ ಗಿಡಗಳನ್ನು ಕಂಡರೆ ತುಂಬಾ ಪ್ರೀತಿ, ಅವುಗಳನ್ನು ತಂದು ಕಂತೀಸ್ವಾಮಿ ಮಠದ ಆವರಣದಲ್ಲಿ ಹಚ್ಚಿ ಪೋಷಿಸುವ ಗೀಳು. ಹೊಲದ ಬದುವಿನ ಬೇಲಿಯಲ್ಲಿ ಬೆಳೆಯಬೇಕಾದ ಯಲ್ಲೂರಿ ಸೊಪ್ಪಿನ ಗಿಡವು ಮಠದ ಆವರಣದಲ್ಲಿ ಪೊದೆಯಂತೆ ಹುಲುಸಾಗಿ ಬೆಳೆದು ನಿಂತಿತ್ತು. ಚಿಟ್ಟೆಯೊಂದು ಆ ಯಲ್ಲೂರಿ ಗಿಡದ ಸುತ್ತು ಪ್ರದಕ್ಷಣೆ ಹಾಕುತ್ತಿತ್ತು. ಆ ಗಿಡದಲ್ಲಿ ಇನ್ನೂ ಹೂವೇ ಬಿಟ್ಟಿಲ್ಲ, ಯಾಕೆ ಈ ಪ್ರದಕ್ಷಣೆ ಎಂದು ಸ್ವಲ್ಪ ಹತ್ತಿರ ಹೋದೆ, ಆ ಚಿಟ್ಟೆ ಚಿಗುರೆಲೆಗಳ ಮೇಲ್ಭಾಗದಲ್ಲಿ ಮೊಟ್ಟೆಗಳನ್ನು ಇಡುತ್ತಿತ್ತು. ತಕ್ಷಣವೇ ಮನೆಗೆ ಬಂದು ಕ್ಯಾಮೆರಾವನ್ನು ಹಿಡಿದು ಆ ಚಿಗುರೆಲೆಯಲ್ಲಿ ಇಟ್ಟಿದ್ದ ಮೊಟ್ಟೆಯ ಫೋಟೊವನ್ನು ಕ್ಲಿಕ್ಕಿಸಿದೆ. ಹೆಣ್ಣು ಚಿಟ್ಟೆಯು ಮಿಲನ ಕ್ರಿಯೆ ಪೂರ್ಣಗೊಂಡ ಬಳಿಕ ತನ್ನ ನಿರ್ದಿಷ್ಟವಾದ ಆತಿಥೇಯ ಸಸ್ಯಗಳ ಚಿಗುರೆಲೆಗಳಲ್ಲಿ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಯು ಅಚ್ಚ ಬಿಳಿ, ಉದ್ದ ಗೋಪುರಾಕೃತಿಯಲ್ಲಿತ್ತು. ಮೇಲ್ಮೈಯಲ್ಲಿ ಉದ್ದಕ್ಕೆ ಉಬ್ಬು-ತಗ್ಗುಗಳಿದ್ದವು. ಚಿಟ್ಟೆಗಳು ದೃಷ್ಟಿ ಮತ್ತು ವಾಸನೆಯ ಸಹಾಯದಿಂದ ಆತಿಥೇಯ ಸಸ್ಯಗಳನ್ನು ಗುರುತಿಸುತ್ತವೆ. ಹೆಣ್ಣು ಚಿಟ್ಟೆಯು ಒಂದು ಎಲೆಯಲ್ಲಿ ದೂರ ದೂರವಾಗಿ ಅನೇಕ ಮೊಟ್ಟೆಗಳನ್ನು ಇಟ್ಟಿತ್ತು. ಮೊಟ್ಟೆಗಳ ಮೇಲ್ಭಾಗದ ಮಧ್ಯದಲ್ಲಿ ಸೂಕ್ಷ್ಮವಾದ 'ಮೋಕ್ರೋಪೈಲ್' ಎಂಬ ರಚನೆಯಿದೆ ಇದರ ಮುಖಾಂತರ ನವಜಾತ ಕಂಬಳಿಹುಳು ಮೊಟ್ಟೆಯೊಡೆದು ಹೊರಬರುತ್ತದೆ.

ಸುಮಾರು ಮೂರು ದಿನ ಬಿಟ್ಟು ಮತ್ತೆ ಅದೇ ಗಿಡದ ಹತ್ತಿರ ಹೋಗಿ ನೋಡಲಾಗಿ ನನಗೊಂದು ಅಚ್ಚರಿ ಕಾದಿತ್ತು. ಮೊಟ್ಟೆಗಳಿಂದ ಕಂಬಳಿ ಹುಳು(ಲಾರ್ವ)ವು ಹೊರ ಬಂದಾಗಿತ್ತು, ಈ ನವಜಾತ ಕಂಬಳಿಹುಳುವು ಹಳದಿ ಮಿಶ್ರಿತ ಹಸಿರು ವರ್ಣದಲ್ಲಿತ್ತು. ಮೊಟ್ಟೆಯೊಡೆದು ಹೊರಬಂದ ನವಜಾತ ಕಂಬಳಿಹುಳು ಚಿಗುರೆಲೆಗಳನ್ನು ತಿನ್ನಲು ಪ್ರಾರಂಭಿಸುತ್ತವೆ. ಸತತವಾಗಿ ಭಕ್ಷಣೆ ಆರಂಭಿಸಿದ ಕಂಬಳಿಹುಳು ಗಾತ್ರದಲ್ಲಿ ದೊಡ್ಡದಾಗುತ್ತಾ ಬಲಿತ ಎಲೆಗಳನ್ನು ಆಹಾರವಾಗಿ ಸೇವಿಸುತ್ತವೆ. ಕಂಬಳಿಹುಳುವಿನ ಹಂತವು ಚಿಟ್ಟೆಯ ಬೆಳವಣಿಗೆಯ ಒಂದು ಹಂತವಾಗಿದೆ. ಆತಿಥೇಯ ಸಸ್ಯಗಳ ಭಾಗಗಳನ್ನು ಬಕಾಸುರನಂತೆ ಭಕ್ಷಿಸುತ್ತಾ ಗಾತ್ರದಲ್ಲಿ ದೊಡ್ಡದಾಗುತ್ತಾ ಬೆಳೆಯುತ್ತವೆ. ಈ ಚಿಟ್ಟೆಯ ಹೆಸರು 'ಗೆರೆ ಅಲೆಮಾರಿ' ಚಿಟ್ಟೆ, ಆ ಯಲ್ಲೂರಿ ಗಿಡವನ್ನು ಕೊಲ್ಲೋಗಾಚೆ ಎಂದು ಸಹ ಕರೆಯುತ್ತಾರೆ.

ವೈಜ್ಞಾನಿಕವಾಗಿ Cassia occidentalis or Senna occidentalis ಎಂದು ಹೆಸರಿಸಿ Caesalpiniaceae ಕುಟುಂಬದ ಈ ಸಸ್ಯ ಚಿಟ್ಟೆಯ ಕಂಬಳಿಹುಳುವಿನ ಆತಿಥೇಯ ಸಸ್ಯವಾಗಿದೆ.



ಈ ಕಂಬಳಿಹುಳದ ದೇಹವು ಸುಮಾರು 41 ಮೀಲಿ ಮೀಟರ್ ಉದ್ದವಿದ್ದು, ದೇಹದಲ್ಲಿ 14 ಖಂಡಗಳಿರುತ್ತವೆ. 1ನೇ ಖಂಡವು ತಲೆ ಭಾಗವಾದರೆ 2 ರಿಂದ 4ನೇ ಖಂಡವು ಎದೆಭಾಗ, 5 ರಿಂದ 14ನೇ ಖಂಡವು ಉದರ ಭಾಗವಾಗಿರುತ್ತದೆ. ತಲೆ ಭಾಗದಲ್ಲಿ ಎರಡು ಸಂಯುಕ್ತಾಕ್ಷಿಗಳಿವೆ. ತಲೆಯ ಮಧ್ಯಭಾಗದಲ್ಲಿ ಸೀಳಿಕೆಯಂತಹ ರಚನೆ ಇದೆ. ಬಾಯಿಯ ಹಿಂಬದಿಯಲ್ಲಿ 'ಸ್ಪಿನ್ನರೆಟ್'(Spinneret) ಎಂಬ ಅಂಗವಿದ್ದು, ಇದರ ಮೂಲಕ ಕಂಬಳಿಹುಳುವು ಗಿಡದ ದಿಂಡಿಗೆ ಹಿಡಿದಿರುವಂತೆ ರೇಷ್ಮೆಯ ಎಳೆಯನ್ನು ಸ್ರವಿಸುತ್ತದೆ. ಎದೆಭಾಗದಲ್ಲಿ ಮೂರು ಜೊತೆ ನಿಜಪಾದಗಳಿದ್ದು, ಉದರದ 7 ರಿಂದ 10ನೇ ಖಂಡದವರೆಗೆ ಪ್ರತಿ ಖಂಡದಲ್ಲಿ ಒಂದು ಜೊತೆ ಮಿಥ್ಯಪಾದಗಳಿರುತ್ತವೆ. 14ನೇ ಖಂಡದಲ್ಲಿಯೂ ಮಿಥ್ಯಪಾದವಿದ್ದು ಅದನ್ನು 'ಕ್ಲಾಸ್ಪ್ಸ್ರ್'(Classper) ಎನ್ನುವರು. ದೇಹದ ಎರಡು ಬದಿಗಳಲ್ಲಿ ಕಪ್ಪು ಚುಕ್ಕೆಯಂತಹ ಸ್ಪೈರಾಕಲ್ ಅಂಗವಿದ್ದು ಇದರ ಮೂಲಕ ಕಂಬಳಿಹುಳು ಉಸಿರಾಡುತ್ತದೆ.

ಕಂಬಳಿಹುಳು ಬೆಳೆದಂತೆ ಹಸಿರು ಬಣ್ಣ ಹೊಂದುತ್ತದೆ. ದೇಹದ ಎರಡು ಬದಿಗಳಲ್ಲಿ ಉದ್ದವಾದ ಬಿಳಿ ಗೆರೆಗಳಿರುತ್ತವೆ. ದೇಹದ ಮೇಲ್ಭಾಗದಲ್ಲಿ ಕಪ್ಪು ಬಣ್ಣದ ಸಣ್ಣ ಗಂಟಿನಂತಹ (Tubercles) ರಚನೆಗಳಿವೆ. ತಲೆ ಭಾಗವು ಹಸಿರಾಗಿದೆ. ಎಲೆಯ ಮೇಲೆ ವಿಶ್ರಮಿಸುತ್ತದೆ. ಕಂಬಳಿಹುಳು ಬೆಳೆದಂತೆ ದೇಹದ ಹೊರ ಚರ್ಮವನ್ನು ಕಳಚುತ್ತದೆ. ಈ ಪ್ರಕ್ರಿಯೆಯನ್ನು ಪೊರೆ ಕಳಚುವಿಕೆ (ಮೌಲ್ಟಿಂಗ್- Moulting) ಎನ್ನುತ್ತಾರೆ. ಕಂಬಳಿಹುಳು 5 ಬಾರಿ ಪೊರೆ ಕಳಚುತ್ತದೆ. ಎರಡು ಪೊರೆ ಕಳಚುವಿಕೆಗಳ ನಡುವಿನ ಅವಧಿಯನ್ನು ಹಂತ(Instar) ಎನ್ನುತ್ತಾರೆ. ಈ ಪೊರೆ ಕಳಚುವಿಕೆ ಹಂತದಲ್ಲಿ ಕಂಬಳಿಹುಳದ ವಿನ್ಯಾಸ ಬದಲಾವಣೆಗೊಳ್ಳುತ್ತಾ ಹೋಗುತ್ತದೆ. ಚಿಟ್ಟೆಗಳ ಕಂಬಳಿಹುಳುವಿನಲ್ಲಿ 4 ಹಂತಗಳಿವೆ, ಈ ನಾಲ್ಕು ಹಂತಗಳು ಪೂರ್ಣಗೊಂಡ ಬಳಿಕ ಕಂಬಳಿಹುಳು ಕೋಶಾವಸ್ಥೆಗೆ ತಲುಪುತ್ತದೆ. ನಾನು ದಿನವೂ ಆ ಗಿಡದ ಹತ್ತಿರ ಹೋಗಿ ಕಂಬಳಿಹುಳುವಿನ ಚಲನ-ವಲನವನ್ನು ವಿಕ್ಷಿಸುತ್ತಾ ಫೋಟೊ ಕ್ಲಿಕ್ಕಿಸುವುದರ ಜೊತೆಗೆ ಚಿಟ್ಟೆ ವೀಕ್ಷಣಾ ಪುಸ್ತಕದಲ್ಲಿ ದಾಖಲಿಸತೊಡಗಿದೆ.



ಮಾರನೆಯ ದಿನ ಮುಂಜಾನೆ ಒಂದು ಕಂಬಳಿಹುಳು ಹತ್ತಿರವಿದ್ದ ಎಕ್ಕದ ಗಿಡದ ಕಾಂಡದತ್ತ ನಿಧಾನವಾಗಿ ಸಾಗತೊಡಗಿತು. ಹೌದು ಇದು ಕೋಶಾವಸ್ಥೆ ಹಂತಕ್ಕೆ ತಲುಪಿರಬೇಕು ಅದಕ್ಕಾಗಿಯೆ ಇದು ಆತಿಥೇಯ ಸಸ್ಯವನ್ನು ಬಿಟ್ಟು ಹೋಗುತ್ತಿದೆ ಎಂದುಕೊಳ್ಳುವ ಹೊತ್ತಿಗೆ ನನ್ನ ಊಹೆಯಂತೆ ಅದು ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವುದಕ್ಕೋಸ್ಕರ ಈ ಆತಿಥೇಯ ಸಸ್ಯವನ್ನು ಬಿಟ್ಟು ಆ ಎಕ್ಕೆ ಗಿಡದತ್ತ ನಡೆದಿತ್ತು. ಅಲ್ಲಿ ಮೇಲೆರಡು ಕೆಳಗೆರಡು ಎಲೆಗಳಿದ್ದು ವೈರಿಗಳಿಂದ ರಕ್ಷಣೆ ನೀಡುವಂತಹ ಸೂಕ್ತ ಜಾಗವನ್ನು ಆಯ್ಕೆ ಮಾಡಿಕೊಂಡು, ತನ್ನ ದೇಹದಿಂದ ರೇಷ್ಮೆ ಎಳೆಯನ್ನು ಬಿಡುತ್ತಾ ಎದೆಭಾಗಕ್ಕೆ ಸುತ್ತಿಕೊಂಡು, ಎಕ್ಕದ ಗಿಡದ ರೆಂಬೆಗೆ ರೇಷ್ಮೆ ಎಳೆಯನ್ನು ಅಂಟಿಸಿ ಕಂಬಳಿಹುಳು ಅಲುಗಾಡದೆ ಕುಳಿತುಕೊಂಡಿತು. ಕೋಶಾವಸ್ಥೆ ಹಂತಕ್ಕೆ ತಲುಪುವ ಮೊದಲಿನ ದಿನ ಕಂಬಳಿಹುಳುವು ಆಹಾರ ಸೇವನೆಯನ್ನು ಸಂಪೂರ್ಣವಾಗಿ ನಿಲ್ಲಿಸಿರುತ್ತದೆ. ಸಮಯ ಕಳೆದಂತೆ ಅದರಲ್ಲಿ ಬದಲಾವಣೆ ಹೊಂದುತ್ತಾ ತಲೆಯಿಂದ ಗುದಭಾಗದವರೆಗೂ ಹೊರ ಕವಚ ರಚನೆಗೊಳ್ಳುತ್ತಾ ಹೋಗಿ ತಲೆಯ ಮುಂಭಾಗದಲ್ಲಿ ಮೊನಚಾದ ರಚನೆಯಾಗಿ, ಎದೆಭಾಗವು ಸ್ವಲ್ಪ ಉಬ್ಬುಗೊಂಡು, 28 ಮೀಲಿ ಮೀಟರ್ ಉದ್ದದ ಹಚ್ಚಹಸಿರು ವರ್ಣದ ಶಂಖಾಕೃತಿಯ ಕೋಶವಾಗುತ್ತದೆ ಎಂದು ಓದಿದ್ದ ನಾನು ಕಣ್ಮುಂದೆಯೇ ನೋಡುತ್ತಿದ್ದೆ. ಈ ಕೋಶದ ಕೆಳಭಾಗವು ಕಾಂಡಗಳಿಗೆ ಅಂಟಿಕೊಂಡಿದ್ದು ಮೇಲ್ಭಾಗವು ಚಿಕ್ಕ ರೇಷ್ಮೆ ಎಳೆಯ ಸಹಾಯದಿಂದ ಎಕ್ಕದ ಗಿಡದ ರೆಂಬೆಯನ್ನು ಬಿಗಿದಪ್ಪಿ ಹಿಡಿದುಕೊಂಡಿತು.

ಪ್ರತಿ ದಿನವು ಆ ಕೋಶದಲ್ಲಾಗುವ ಬದಲಾವಣೆಗಳನ್ನು

ಟಿಪ್ಪಣಿ ಮಾಡಿಕೊಳ್ಳುತ್ತಾ ಫೋಟೋಗ್ರಫಿಯನ್ನು ಮಾಡಿಕೊಳ್ಳುತ್ತಿದ್ದೆ. ಈ ಕೋಶಾವಸ್ಥೆಯ ಹಂತವು ಚಿಟ್ಟೆಯ ಸುಪ್ತಾವಸ್ಥೆಯಾಗಿರುತ್ತದೆ. ಈ ಹಂತದಲ್ಲಿ ಕೋಶದ ಒಳಗೆ ಚಿಟ್ಟೆಯ ರೂಪಪರಿವರ್ತನೆಯಾಗುತ್ತದೆ. ದಿನಗಳು ಕಳೆದಂತೆ ಆ ಕೋಶದಲ್ಲಿ ರೆಕ್ಕೆಗಳ ಅಂಚಿನ ಪಟ್ಟಿಗಳು ಮಾಸಲು, ಹಸಿರು ದೇಹ ಕಾಣತೊಡಗಿತು. ಕೋಶ ರಚನೆಯ ಮೊದಲನೆಯ ಹಂತ ಪೂರ್ಣವಾಗುವ ಹೊತ್ತಿಗೆ ಪ್ರೌಢ ಚಿಟ್ಟೆಯಲ್ಲಿನ ಎಲ್ಲಾ ಭಾಗಗಳು ರೂಪುಗೊಂಡು ಕೋಶದಲ್ಲಿ ಚಿಟ್ಟೆ ಬೆಳೆಯುತ್ತಾ ಹೋದಂತೆ ತಲೆ, ಕಾಲುಗಳು, ಮೀಸೆ, ಹೀರುಗೊಳವೆ ಭಾಗಗಳು ಹೊರಗಿನಿಂದ ಮಸುಕಾಗಿ ಕಂಡುಬರತೊಡಗಿದವು. ರೂಪಪರಿವರ್ತನೆ ಪೂರ್ಣಗೊಂಡ ಬಳಿಕ ರೆಕ್ಕೆ ಮೂಡುವ ಪ್ರದೇಶವು ಪಾರದರ್ಶಕವಾಗಿ ಕಾಣುತ್ತಿತ್ತು. ಕೋಶದಿಂದ ಚಿಟ್ಟೆಯು ಯಾವಾಗ ಹೊರಗೆ ಬರುವುದೆಂಬುದು ಹೊರಗಿನ ವಾತಾವರಣ, ಉಷ್ಣತೆ, ತೇವಾಂಶ ಮುಂತಾದ ಅಂಶಗಳಿಂದ ನಿರ್ಧಾರವಾಗುತ್ತದೆ. ನಾನು ಗಮನಿಸುತ್ತಿದ್ದ ಕೋಶವು ೮ನೇ ದಿನ ಮುಂಜಾನೆ ಹಸಿರು ವರ್ಣಕ್ಕೆ ತಿರುಗಿ, ಪ್ರೌಢ ಚಿಟ್ಟೆಯು ಹೊರ ಬರುವ ಆತುರದಲ್ಲಿತ್ತು.



ನಾನು ಕ್ಯಾಮೆರಾವನ್ನು ಸಿದ್ಧಪಡಿಸಿಕೊಂಡು ಆ ನಿಸರ್ಗದ ಕೌತುಕಕ್ಕಾಗಿ ಕಾಯ್ದುನಿಂತೆ. ಮುಂಜಾನೆ ಸುಮಾರು ಆರು ಗಂಟೆಯಿಂದ 10 ಗಂಟೆಯವರೆಗೂ ಕಾಯುತ್ತಲೇ ಇದ್ದೆ. ಆ ದಿನ ಮೋಡ ಕವಿದ ವಾತಾವರಣವಿದ್ದು ರವಿತೇಜನ ದರ್ಶನ ಆಗೊಮ್ಮೆ ಇಗೊಮ್ಮೆ ಮಾತ್ರ ಆಗುತ್ತಿತ್ತು. ಚಿಟ್ಟೆಯು ಹೊರ ಬರುವ ಮುನ್ನ ತನ್ನ ದೇಹದ ದ್ರವಗಳನ್ನು ತಲೆ ಮತ್ತು ಎದೆಯ ಭಾಗಗಳಿಗೆ ಹರಿಸಿ ಹಿಗ್ಗುವಂತೆ ಮಾಡಿದಾಗ ಕೋಶದ ತಲೆಭಾಗವನ್ನು ಹೊರ ಕವಚದಿಂದ ಸೀಳಿ ಬರುತ್ತಿದ್ದ ಹಾಗೆ ತನ್ನ ಕಾಲುಗಳನ್ನು ಹೊರ ನೂಕಿ, ಆಮೇಲೆ ಕಾಲುಗಳಿಗೆ ಆಧಾರ ಸಿಕ್ಕಿ ನಿಧಾನವಾಗಿ ತನ್ನ ಇಡೀ ದೇಹವನ್ನು ಹೊರ ಹಾಕಿ ಬಂದು ಕೋಶಕ್ಕೆ ಜೋತು ಬಿದ್ದು ನೇತಾಡ ತೊಡಗಿತು. ಸಂಪೂರ್ಣ ದೇಹವು ಒದ್ದೆಯಾಗಿದ್ದರಿಂದ ಹಾರಲು ಸಾಧ್ಯವಿರಲಿಲ್ಲ. ಸೂರ್ಯನ ಬಿಸಿಲು ಬಿದ್ದ ಹಾಗೆ ಸುಮಾರು 30 ನಿಮಿಷಗಳ ಸಮಯ ತನ್ನ ದೇಹವನ್ನು ಒಣಗಿಸುತ್ತಾ ಪ್ರಕೃತಿಯಲ್ಲಿನ ಸಾಕಷ್ಟು ಪ್ರಮಾಣದ ಗಾಳಿಯನ್ನು ತನ್ನ ದೇಹದೊಳಗೆ ಎಳೆದುಕೊಂಡು ಆ ಮೂಲಕ ರಕ್ತ ಸೇರಿ ರೆಕ್ಕೆಗಳನ್ನು ಅರಳಿಸುತ್ತಾ ವಿಸ್ತಾರಗೊಳಿಸಿತು. ಕೆಲ ಸಮಯದ ನಂತರ ರೆಕ್ಕೆ ಸಂಪೂರ್ಣ ಒಣಗಿ ಗಟ್ಟಿಯಾದ ಮೇಲೆ ಪೂರ್ಣ ಪ್ರಮಾಣದ ಮಾಸಲು ಹಸಿರು ಚಿಟ್ಟೆಯಾಗಿ ಒಂದೊಂದೇ ಹೆಜ್ಜೆ ಇಡುತ್ತಾ ಎಕ್ಕದ

ಎಲೆಯ ತುದಿಯವರೆಗೆ ಬಂದು ರೆಕ್ಕೆ ಬಿಚ್ಚಿ ಹಾರುತ್ತಾ ಅಲ್ಲೇ ಹತ್ತಿರವಿದ್ದ ಹೂವಿನ ಮೇಲೆ ಕುಳಿತು ಮಕರಂದದ ಸವಿಯನ್ನು ಹೀರಲಾರಂಭಿಸಿತು.

ಗೆರೆ ಅಲೆಮಾರಿ ಚಿಟ್ಟೆಯು ಮಾಸಲು ಹಸಿರು ವರ್ಣದ ಚಿಟ್ಟೆ. ನೆಲದಿಂದ ಕಡಿಮೆ ಅಂತರದ ಮೇಲ್ಮಟ್ಟದಲ್ಲಿ ಅತ್ಯಂತ ವೇಗವಾಗಿ ಹಾರಾಡುತ್ತಿರುತ್ತವೆ. ಕುಳಿತಾಗ ರೆಕ್ಕೆಗಳನ್ನು ಮಡಚಿಕೊಂಡಿರುತ್ತವೆ. ಗುಂಪಾಗಿ ತೇವವಿರುವ ಮಣ್ಣಿನಿಂದ ಲವಣಾಂಶವನ್ನು ಹೀರುತ್ತವೆ. ವರ್ಷದ ಎಲ್ಲಾ ಋತುಗಳಲ್ಲಿ ಕಾಣಸಿಗುತ್ತವೆ. ಸಮತಟ್ಟು ಪ್ರದೇಶ, ಕೃಷಿ ಭೂಮಿ, ಮನೆಯ ಹೂತೋಟ, ಕುರುಚಲು ಕಾಡು, ಎಲೆ ಉದುರಿಸುವ ಕಾಡು, ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕಂಡು ಬರುತ್ತವೆ. ಕನ್ನಡದಲ್ಲಿ 'ಗೆರೆ ಅಲೆಮಾರಿ' ಚಿಟ್ಟೆ ಎನ್ನುವ ಇವನ್ನು ಚಿಟ್ಟೆ ತಜ್ಞರು ಆಂಗ್ಲ ಭಾಷೆಯಲ್ಲಿ ಮಾಟಲ್ಡ್ ಎಮಿಗ್ರಂಟ್ (Mottled Emigrant) ಎಂದು ಕರೆದು ವೈಜ್ಞಾನಿಕ ನಾಮಧೇಯವಾಗಿ Catopsilia pyranthe ಎಂದು ಹೆಸರಿಸುತ್ತಾರೆ. ಇದನ್ನು ಸಂಧಿಪದಿಗಳ (Arthropoda) ಕೀಟ (Insecta) ವರ್ಗದ ಲೆಫಿಡೊಪ್ಟೆರಾ (Lepidoptera) ಗಣದ ಬಿಳಿ ಮತ್ತು ಹಳದಿ ಚಿಟ್ಟಗಳ 'ಪೈರಿಡೆ' (Pieridae- White And Yellow Butterflies) ಕುಟುಂಬಕ್ಕೆ ಸೇರಿಸಿದ್ದಾರೆ.ಇವು ವಲಸೆ ಹೋಗುವ ಪ್ರವೃತ್ತಿ ಹೊಂದಿವೆ.

ಇದರ ರೂಪಾಂತರದ ಹಂತಗಳಲ್ಲಿ ಪ್ರೌಢಾವಸ್ಥೆ ಬಹಳಾ ಸುಂದರ ಹಾಗೂ ಮಹತ್ವದ ಹಂತವಾಗಿದೆ. ಪ್ರೌಢ ಚಿಟ್ಟೆಯ ಮುಖ್ಯ ಉದ್ದೇಶ ಸಂತಾನೋತ್ಪತ್ತಿ. ಅದಕ್ಕಾಗಿಯೇ ನಾನೋಡಿದ ಪ್ರೌಢ 'ಗೆರೆ ಅಲೆಮಾರಿ' ಚಿಟ್ಟೆಯು ತನ್ನ ಸಂಗಾತಿಯನ್ನು ಅರಸುತ್ತಾ ಹೂವಿನಿಂದ ಹೂವಿಗೆ ಹಾರುತ್ತಾ ಸುಂದರ ನಿಸರ್ಗದಲ್ಲಿ ಕಣ್ಮರೆಯಾಯಿತು.



ಶಶಿಧರಸ್ವಾಮಿ ಆರ್. ಹಿರೇಮಠ
ಕದರಮಂಡಲಗಿ





# ಹದ್ದು

ನಗರದ ಒಂದು ಬೀದಿಯಲ್ಲಿ ಹದ್ದೊಂದು ಆಕಾಶದಿಂದ ಭೂಮಿಯ ಕಡೆಗೆ ವೇಗವಾಗಿ ಬರತೊಡಗಿತ್ತು. ನೋಡುತ್ತಿದ್ದಂತೆ ಅದು ನೆಲಕ್ಕೆ ಬಹಳ ಹತ್ತಿರ ಬಂದಿತು. ಇದೇನಿದು ಹದ್ದು ಇಷ್ಟು ಕೆಳಗೆ ಏಕೆ ಬರುತ್ತಿದೆ ಎಂದುಕೊಳ್ಳುವಷ್ಟರಲ್ಲಿಯೇ, ಆ ಹದ್ದಿನ ಒಂದು ರೆಕ್ಕೆ ಹರಿದು ರಕ್ತ ಸೋರುತ್ತಿತ್ತು. ಹಾಗೆ ಗಾಯಗೊಂಡ ಹದ್ದು ಒಂದು ಮನೆಯ ಮುಂದೆ ಬಿದ್ದಿತು. ಬಿದ್ದಿರುವ ಹದ್ದಿಗೆ ಚಿಕ್ಕ ಚಿಕ್ಕ ಹುಡುಗರು, ಸಣ್ಣ ಸಣ್ಣ ಕಲ್ಲುಗಳನ್ನು ತೆಗೆದುಕೊಂಡು ಎಸೆಯತೊಡಗಿದರು.

ಅಲ್ಲೆ ನಿಂತು ಇದನ್ನು ನೋಡುತ್ತಿದ್ದಳು ಪುಟ್ಟ ಹುಡುಗಿ ಚಂದನ. ಅವಳು ಆಗ ತಾನೇ ತೊದಲು ನುಡಿಯನ್ನಾಡಲು ಕಲಿತಿದ್ದಳು. ಬಿದ್ದ ಹದ್ದನ್ನು ನೋಡಿದ್ದೇ ತಡ, ಅವಳು ಪಕದಲ್ಲೇ ಇದ್ದ ತನ್ನ ಮನೆಯೊಳಗೆ ಓಡಿದಳು. ಒಳಗೆ ಹೋಗಿ ಅವಳು ತಂದೆಯ ಒಂದು ಕೈಯನ್ನು ತನ್ನ ಎಡಗೈಯಲ್ಲಿ ಹಿಡಿದು ಎಳೆಯುತ್ತಾ, ಬಲಗೈ ತೋರು ಬೆರಳಿನಲ್ಲಿ ಏನನ್ನೋ ತೋರಿಸತೊಡಗಿದಳು. ತನ್ನ ತೊದಲು ನುಡಿಯಲ್ಲಿ ಹೊರಗಿನ ಸಂಗತಿಯನ್ನು ವಿವರಿಸಲು ಯತ್ನಿಸುತ್ತಿದ್ದಳು.



ಆದರೆ, ಚಂದನಳ ತಂದೆಗೆ ಅವಳ ತೊದಲುನುಡಿ ಸರಿಯಾಗಿ ಅರ್ಥವಾಗಲಿಲ್ಲ. ಏನೋ ಇರಬಹುದೆಂದುಕೊಂಡು ಮಗಳ ಜೊತೆ ಹೊರಗೆ ಬಂದರು. ಬೀದಿಯಲ್ಲಿ ಬಿದ್ದಿದ್ದ ಹದ್ದು, ಅದಕ್ಕೆ ಕಲ್ಲುಗಳನ್ನು ಎಸೆಯುತ್ತಿದ್ದ ಹುಡುಗರನ್ನು ನೋಡಿದರು. ಹುಡುಗರಿಗೆ ಸ್ವಲ್ಪ ಬೈದು ಅವರನ್ನು ಹಿಂದಕ್ಕೆ ಸರಿಸಿದರು. ನಂತರ ತಮ್ಮ ಕೈಯಲ್ಲಿದ್ದ ಮೊಬೈಲ್‌ನಲ್ಲಿ ಯಾರೊಂದಿಗೋ ಮಾತನಾಡಲು ತೊಡಗಿದರು.

ಚಂದನಳಿಗೆ ಏನೂ ಅರ್ಥವಾಗಲಿಲ್ಲ. ಇದೇನಿದು ಅಪ್ಪ ಯಾರೊಂದಿಗೆ ಮಾತಾಡುತ್ತಿದ್ದಾರೆ? ಹದ್ದು ಹಾಗೇ ಬಿದ್ದಿದೆಯಲ್ಲ? ಎಂಬ ಹಲವು ಪ್ರಶ್ನೆಗಳು ಆ ಪುಟಾಣಿಯ ಮನಸ್ಸಿನಲ್ಲಿ ಮೂಡಿದವು. ಅವಳು ಅಪ್ಪನ ಗಮನವನ್ನು ಹದ್ದಿನೆಡೆಗೆ ಸೆಳೆಯಲು ಪ್ರಯತ್ನಿಸುತ್ತಿದ್ದಳು. ಚಂದನಳ ಅಪ್ಪ ಫೋನಿನನಲ್ಲಿ ಮಾತಾಡಿ ಮುಗಿಸಿದರು. ನಂತರ ಹದ್ದಿಗೆ ಸ್ವಲ್ಪ ನೀರನ್ನು ಕುಡಿಸಲು ಪ್ರಯತ್ನಿಸುತ್ತಿದ್ದರು.

ಚಂದನಳ ಅಪ್ಪ ಫೋನ್ ಮಾಡಿದ ಸ್ವಲ್ಪ ಸಮಯದಲ್ಲೇ "ಪ್ರಾಣಿ ದಯಾಸಂಘ"ದ ವ್ಯಾನ್ ಬಂದಿತು. ಅದರಲ್ಲಿದ್ದ ಒಂದಿಬ್ಬರು ಇಳಿದು ಬಂದರು. ಮೊದಲು ಹದ್ದಿಗೆ ಮಂಪರು ಬರುವ(ಅರವಳಿಕೆ) ಚುಚ್ಚುಮದ್ದು ಕೊಟ್ಟರು. ನಂತರ ಮುಲಾಮು ಹಚ್ಚಿ, ಪಟ್ಟಿ ಕಟ್ಟಿ ಚಿಕಿತ್ಸೆ ಮಾಡಿದರು. ಸ್ವಲ್ಪ ಹೊತ್ತಿನ ನಂತರ ಹದ್ದು ಚೇತರಿಸಿಕೊಂಡಿತು. ಮುಂದಿನ ಚಿಕಿತ್ಸೆಗಾಗಿ ಹದ್ದನ್ನು ಅವರು ತೆಗೆದುಕೊಂಡು ಹೋದರು.

ಹದ್ದು ಪೂರ್ಣ ಗುಣಮುಖವಾಗುವವರೆಗೂ ಚಂದನ ಮತ್ತು ಅವಳ ತಂದೆ, ದಿನವೂ ಅದು ಚಿಕಿತ್ಸೆ ಪಡೆಯುತ್ತಿದ್ದ ಚಿಕಿತ್ಸಾ ಕೇಂದ್ರಕ್ಕೆ ಹೋಗಿ ನೋಡಿಕೊಂಡು ಬರುತ್ತಿದ್ದರು. ಒಂದು ವಾರದ ನಂತರ ರೆಕ್ಕೆಯ ಗಾಯವು ಪೂರ್ತಿ ವಾಸಿಯಾದ ಮೇಲೆ ಅದನ್ನು ಆಕಾಶಕ್ಕೆ ಹಾರಿಬಿಟ್ಟರು. ಚಂದನ ಸಂತೋಷದಿಂದ ಹದ್ದಿಗೆ ಕೈ ಬೀಸಿದಳು.





- ಪ್ರೇಮಾ ಶಿವಾನಂದ
ಧಾರವಾಡ




# ಸರ್ಪ ಮಾರಕ ಶಿಲೀಂಧ್ರ!

ಕೆಲವು ದಿನಗಳ ಹಿಂದೆ ಕಾಡುಶಿವನಹಳ್ಳಿಯ ದಾರಿಯಿಂದ ಮರಳವಾಡಿಗೆ ಬರುವಾಗ, ರಸ್ತೆಯಲ್ಲೇ ಒಂದು ಹಾವು ಸತ್ತು ಬಿದ್ದಿದ್ದು ಕಂಡಿತು. ಯಾವುದೋ ಗಾಡಿ ಹಾಯಿಸಿಕೊಂಡು ಹೋಗಿರಬಹುದು. ಹಾವುಗಳ, ಪಕ್ಷಿಗಳ ಮತ್ತು ಓತಿಕ್ಯಾತಗಳಂತಹ ಪ್ರಾಣಿಗಳ ರಸ್ತೆ ಸಾವು (Road Kill)ಗಳನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಒಳಗೆ ಹಾದು ಹೋಗುವ ನಮ್ಮ ಊರಿನ ದಾರಿಯಲ್ಲಿ ಬಹಳವಾಗಿ ಗಮನಿಸಿದ್ದೇನೆ. ಆದರೆ.....

ಆ ಹಾವು ನನಗೇಕೋ ಎಂದೂ ನೋಡಿರದ ಬಣ್ಣ ಮತ್ತು ಆಕಾರದಲ್ಲಿದೆ ಎನ್ನಿಸಿತು. ಈ ವಿಷಯ ನನಗೆ ಅರಿವಾಗುವ ಹೊತ್ತಿಗಾಗಲೇ ಆ ಸ್ಥಳದಿಂದ ಮುಂದೆ ಬಂದಿದ್ದೆ. ತಕ್ಷಣ ಗಾಡಿ ತಿರುಗಿಸಿ ವಾಪಾಸ್ ಹೋಗಿ ನೋಡಿದೆ. ಆದರೂ ಸರಿಯಾಗಿ ತಿಳಿಯಲಿಲ್ಲ. ಈಗೀಗ ನಾನು ಸಹ ಸರ್ಪಗಳ ಹೆಸರುಗಳನ್ನು ತಿಳಿದುಕೊಳ್ಳುತ್ತಿದ್ದೆ. ಇದು ನನಗೆ ತಿಳಿಯದ ಹಾವಾದ್ದರಿಂದ, ಇದರ ಹೆಸರು ತಿಳಿಯಲೇ ಬೇಕೆಂದು ನನ್ನಲ್ಲಿದ್ದ, ಇತ್ತೀಚೆಗೆ ಎಲ್ಲರ ಕೈಯಲ್ಲೂ ಸದಾ ಇರುವ 'ಆ ಆಯುಧ'(Phone)ವನ್ನು ತೆಗೆದು 2-3 ಫೋಟೋಗಳನ್ನು ಕ್ಲಿಕ್ಕಿಸಿದೆ. ನಂತರ ನಮ್ಮ ಸ್ನೇಹಿತರಲ್ಲೇ ಸರ್ಪಗಳ ಬಗ್ಗೆ ಸ್ವಲ್ಪ ತಿಳಿದಿದ್ದವರ ಸಹಾಯ ಕೇಳಿದೆ. ಆಗಲೇ ತಿಳಿದದ್ದು ಈ ಹಾವು ಹೆಚ್ಚಾಗಿ ಸಿಗದ ವಿಶಿಷ್ಟ ಜಾತಿಯ ಕೇರೆ ಹಾವು ಎಂದು. ಆದರೆ ಇಂತಹ ವಿಶಿಷ್ಟ ಹಾವು ಮೊದಲ ಭೇಟಿಯಲ್ಲೇ ಹೀಗೆ ರಸ್ತೆಯಲ್ಲಿ ಸತ್ತು ಬಿದ್ದದ್ದು ವಿಷಾದನೀಯ. ವನ್ಯ ಪ್ರದೇಶಗಳಲ್ಲಿನ ರಸ್ತೆಗಳು ಇಂತಹ ಎಷ್ಟೋ ಜೀವಿಗಳಿಗೆ ಮಾರಕವಾಗಿವೆ.







*Forstern's cat snake Roadkill*

ಹಾವುಗಳು ಸ್ವಾಭಾವಿಕವಾಗಿ ಯಾವ ಯಾವ ಕಾರಣಗಳಿಂದ ಸಾಯಬಹುದು ಎಂಬ ಊಹೆ ನಿಮಗಿರಬಹುದು. ಉದಾಹರಣೆಗೆ ಎರಡು ಹಾವುಗಳು ಜಗಳವಾಡುವಾಗ, ತಾನೇ ಬೇರೆ ಜೀವಿಗೆ ಬೇಟೆಯಾಗಿ ಸಾಯಬಹುದು ಅಥವಾ ವಯಸ್ಸಾಗಿ ಸಾಯಬಹುದು ಅಲ್ಲವೇ..! ಆದರೆ ಒಂದು ಬಗೆಯ ಶಿಲೀಂಧ್ರ (Fungus)ದಿಂದ ಕೂಡ ಸರ್ಪಗಳು ಪೂರ್ವ ಮತ್ತು ಮಧ್ಯ ಪಶ್ಚಿಮ ಅಮೇರಿಕ ಭಾಗದಲ್ಲಿ ಸಾಯುತ್ತವೆ ಎಂದರೆ ನೀವು ನಂಬಲೇ ಬೇಕು.

ಹೌದು ಒಫಿಡಿಯೋಮೈಸೆಸ್ ಒಫಿಯೋಡಿಕೊಲ(ophidiomyces ophiodiicola) ಎಂಬ ಮಾರಕ ಶಿಲೀಂಧ್ರವು ಸರ್ಪಗಳ ಮೂತಿಯ ಮೇಲೆ ಬೆಳೆಯುವುದರಿಂದ, ಮರಗಟ್ಟಿ ಅವುಗಳ ತೆವಳಿಕೆಗೆ ಅಡ್ಡಗಾಲು ಹಾಕಿದಂತಾಗುತ್ತದೆ, ಕ್ರಮೇಣ ಈ ಶಿಲೀಂಧ್ರಪೀಡಿತ ಸರ್ಪಗಳು ಸಾವನ್ನಪ್ಪುತ್ತವೆ. ಅಷ್ಟೇ ಅಲ್ಲ, ಈ ಶಿಲೀಂಧ್ರದ ಕಣಗಳು ಮಣ್ಣಿನಲ್ಲಿಯೇ ಇದ್ದು  ಇವುಗಳ ಸಂಪರ್ಕಕ್ಕೆ ಬಂದ ಬೇರೊಂದು ಹಾವಿಗೂ ಮಾರಕವಾಗುತ್ತದೆ. ಈ ಘಟನೆಯು ಕೆಲವು ವರ್ಷಗಳ ಹಿಂದೆ ಎಷ್ಟೋ ಉಭಯವಾಸಿಗಳ ಸಾವಿಗೆ ಕಾರಣವಾಗಿದ್ದ ಚಿಟ್ರಿಡ್ ಶಿಲೀಂಧ್ರ (Chytrid fungus)ದ ಘಟನೆ ಅಥವಾ ಗುಹೆಗಳ ರಾಜರಾದ ಹಾರುವ ಸಸ್ತನಿ(ಬಾವಲಿ)ಗಳ ಬಿಳಿ ಮೂಗಿನ ಕಾಯಿಲೆ (White-nose Syndrome)ಗೆ ಹೋಲುತ್ತದೆ ಎನ್ನುತ್ತಾರೆ ಸಂಶೋಧಕರು. ಶಿಲೀಂಧ್ರದಿಂದ ಹರಡುವ ಈ ಹೊಸ ರೋಗಕ್ಕೆ ಕೆಲವು ದುರ್ಬಲ ಹಾವುಗಳ ಜಾತಿಯಲ್ಲದೇ ಇಡೀ ಸರ್ಪ ಜಾತಿಯೇ ನಿರ್ನಾಮವಾಗಬಹುದು ಎನ್ನುತ್ತಾರೆ ಇಂಡಿಯಾನ ವಿಶ್ವವಿದ್ಯಾಲಯದ ಬ್ರೂಸ್.




***ophidiomyces ophiodiicola***

*ಫಂಗಸ್ ಪೀಡಿತ ಹಾಲಿನ ಹಾವು* ***(Lampropeltis triangulum)***



ಇಂತಹ ಸರೀಸೃಪಗಳ ನಾಶದಿಂದ ಹತೋಟಿಯಲ್ಲಿರುವ ಸಣ್ಣ ಪುಟ್ಟ ಗಾತ್ರದ ಸಸ್ತನಿಗಳ ಸಂಖ್ಯೆ ಏರುವುದರಲ್ಲಿ ಸಂಶಯವೇ ಇಲ್ಲ. ಆದ್ದರಿಂದ ಈ ಮಾರಕ ರೋಗವು ಯಾವ ತರಹದ ಸರ್ಪಗಳಿಗೆ ಹರಡುತ್ತಿವೆ ಎಂಬುದನ್ನು ತಿಳಿಯಲು American Museum of Natural Historyಯ ಸರ್ಪ ವಿಜ್ಞಾನಿ *ಫ್ರಾಂಕ್ ಬರಬ್ರಿಂಕ್.* ಈ ಫಂಗಸ್ ರೋಗವು ಯಾವ ಯಾವ ಸರ್ಪಗಳಿಗೆ ನಿರ್ದಿಷ್ಟವಾಗಿ ಹರಡುತ್ತಿವೆ? ಜೀವವಿಕಾಸದ ನಂಟು ಇರಬಹುದೇ? ಅಥವಾ ಇವುಗಳ ಆವಾಸಸ್ಥಾನಗಳ ಆಧಾರದಲ್ಲಿ ಹರಡುತ್ತಿದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಅವರ ತಂಡದೊಂದಿಗೆ ಹೊರಟಾಗ ಬಯಲಾದ ಸತ್ಯ, ಈ ಮಾರಕವು ಇದ್ಯಾವುದೇ ಕಾರಣಗಳಿಗೆ ಬರುವುದಿಲ್ಲ, ಈ ಶಿಲೀಂಧ್ರದ ಸಂಪರ್ಕಕ್ಕೆ ಬರುವ ಎಲ್ಲಾ ಸರ್ಪಗಳಿಗೂ ಕಂಟಕವಾಗಬಹುದಂತೆ. ಕಥೆ ಇಲ್ಲಿಗೆ ಮುಗಿಯದೆ, ಇನ್ನೂ ಕೆಲವು ಪ್ರಶ್ನೆಗಳಿಂದ ಕೂಡಿದ ಈ ಸಂಶೋಧನೆ ದಡ ತಲುಪಲು ಇನ್ನೂ ಹೆಚ್ಚು ಸಮಯ ಹಾಗೂ ಸರ್ಪಗಳು ಸಂಶೋಧನೆಗೆ ಬೇಕೆನ್ನುತ್ತಾರೆ ಫ್ರಾಂಕ್.



*ಬಾವಲಿಗಳಲ್ಲಿನ* ***White-nose syndrome***

**- ಜೈಕುಮಾರ್.ಆರ್**



# ಎಲ್ಲಿ?

ಚಿಲಿಪಿಲಿಯ ಸದ್ದೆಲ್ಲಿ?
ಉದಯರವಿಯ ಸೊಬಗೆಲ್ಲಿ?
ಹೂವ ರಂಗೆಲ್ಲಿ?
ಹಾರುವ ದುಂಬಿಯೆಲ್ಲಿ?

ನೀಲಾಕಾಶವೆಲ್ಲಿ?
ಹಾರುವ ದುಂಬಿಯೆಲ್ಲಿ?
ಬೆಳದಿಂಗಳ ಬೆಳಕೆಲ್ಲಿ?
ಕಾಳರಾತ್ರಿಯ ಕತ್ತಲೆಲ್ಲಿ?

ನಮ್ಮೂರ ಕೆರೆಯೆಲ್ಲಿ?
ತಾವರೆನೈದಿಲೆಯ ಕೊಳಗಳೆಲ್ಲಿ?
ಕಾಮನ ಬಿಲ್ಲೆಲ್ಲಿ?
ಝರಿತೊರೆಗಳೆಲ್ಲಿ?

ಬಾನಾಡಿಗಳ ತೋರಣವೆಲ್ಲಿ?
ಸಂಜೆ ಹೊತ್ತ ಸೌಮ್ಯತೆಯೆಲ್ಲಿ?
ಶಾಂತ ಕಡಲ ವಿಂಹಂಗಮವೆಲ್ಲಿ?
ಜಟಿಲ ಕಾನನದ ಕಣಿವೆಗಳೆಲ್ಲಿ?

ಏನಿಲ್ಲ... ಇಲ್ಲಿ? ಇಂದೆನಗೆ
ಆ ಕಲ್ಪನೆಯ ಕನಸೊಂದೇ ನನಗಿಂದು.



- ಕೃಷ್ಣನಾಯಕ್

# ಪ್ರಕೃತಿ ಬಿಂಬ



**ಹಪ್ಪಾಟೆ ಹಾವು** © **ವಿಪಿನ್ ಬಾಳಿಗ**

ಜಗತ್ತಿನಲ್ಲಿ ಅತೀ ಹೆಚ್ಚಿನದಾಗಿ, ಅಲ್ಲದೇ ದಯನೀಯ ರೀತಿಯಲ್ಲಿ ಎಂಬಷ್ಟರ ಮಟ್ಟಿಗೆ ತಪ್ಪಾಗಿ ಅರ್ಥೈಸಿಕೊಳ್ಳಲಾಗಿರುವ ಜೀವಿಗಳೆಂದರೆ ನಾವೇ!...



**ನಾಗರಹಾವು** © **ವಿಪಿನ್ ಬಾಳಿಗ**

ನಾನು ಹಾಲು ಕುಡಿಯುವ ಜೀವಿಯಲ್ಲ. ಹಾಗೆಯೇ ನನ್ನ ತಲೆಯಲ್ಲಿ ಯಾವುದೇ ರೀತಿಯ ಅತ್ಯಮೂಲ್ಯ ವಜ್ರವೂ ಇಲ್ಲ....



**ಬಿದಿರು ಮಂಡಲ** **© ವಿಪಿನ್ ಬಾಳಿಗ**

ನಾನು ನಿಮ್ಮನ್ನಾಗಲಿ ಅಥವಾ ಯಾವುದೇ ಪ್ರಾಣಿಗಳನ್ನಾಗಲಿ ಸಮ್ಮೋಹನಗೊಳಿಸುವುದಿಲ್ಲ, ನನ್ನನ್ನು ಕಂಡ ತಕ್ಷಣ ಕೆಲವು ಜನ ಭಯ ಬೀಳುತ್ತಾರೆ, ಆ ಭಯವೇ ಅವರನ್ನ ಚಲನಹೀನರನ್ನಾಗಿ ಮಾಡುತ್ತದೆ, ಇವರ ಚಲನಹೀನತೆಯನ್ನು ಕಂಡವರು ನಾನೇ ಇವರನ್ನು ಸಮ್ಮೋಹನಗೊಳಿಸಿದೆ ಎಂದುಕೊಳ್ಳುತ್ತಾರೆ.




**ಹಸಿರು ಹಾವು** © ವಿಪಿನ್ ಬಾಳಿಗ

ನಾನು "ಹತುಲ್ಲಾ" ಜಾತಿಗೆ ಸೇರಿದ ಹಾವು, "ಹತುಲ್ಲಾ " ಎಂದರೆ ಸಿನ್ಹೀಳಿಯರ ಭಾಷೆಯಲ್ಲಿ ಕಣ್ಣು ಕೀಳುವವ ಅಥವಾ ಕಣ್ಣಿಗೆ ಚುಚ್ಚುವವ ಎಂದರ್ಥ, ಆದರೆ ನಿಜದಲ್ಲಿ ನಾನು ಯಾರ ಕಣ್ಣನ್ನು ಕೀಳುವುದೂ ಇಲ್ಲಾ ಅಥವಾ ಕುಕ್ಕುವುದೂ ಇಲ್ಲ. ಎಷ್ಟೊ ಜನ ಈ ಮೂಢನಂಬಿಕೆಯನ್ನು ನಂಬಿ, ನಾನು ಕಣ್ಣು ಕೀಳುತ್ತೇನೆ ಎಂದು ಭಾವಿಸಿ, ನನ್ನ ಪ್ರಾಣವನ್ನೇ ತೆಗೆಯುತ್ತಾರೆ.


- **ಮೂಲ :** ವಿಪಿನ್ ಬಾಳಿಗ


**ಅನುವಾದ :** ಶಂಕರಪ್ಪ .ಕೆ .ಪಿ



ಕಾನನ
ಜನವರಿ 2017
WILDLIFE CONSERVATION GROUP


ಕಾನನ
ಫೆಬ್ರವರಿ 2017
WILDLIFE CONSERVATION GROUP



ಕಾನನ
ಮಾರ್ಚ್ 2017
WILDLIFE CONSERVATION GROUP



ಕಾನನ
ಏಪ್ರಿಲ್ 2017
WILDLIFE CONSERVATION GROUP


ಕಾನನ
ಮೇ 2017
WILDLIFE CONSERVATION GROUP


ಕಾನನ
ಜೂನ್ 2017
WILDLIFE CONSERVATION GROUP



ಕಾನನ
ಜುಲೈ 2017
WILDLIFE CONSERVATION GROUP


ಕಾನನ


ಕಾನನ
ಸೆಪ್ಟೆಂಬರ್ 2017
WILDLIFE CONSERVATION GROUP


ಕಾನನ
ಅಕ್ಟೋಬರ್ 2017
WILDLIFE CONSERVATION GROUP


ಕಾನನ
ನವೆಂಬರ್ 2017
WILDLIFE CONSERVATION GROUP


ಕಾನನ
ಡಿಸೆಂಬರ್ 2017
WILDLIFE CONSERVATION GROUP